ಶ್ರೀಮತಿ ಚಂದ್ರಪ್ರಭಾ ಅರಸು.—ಬೇರೆ ರಾಜ್ಯಗಳಲ್ಲಿ ಇರಬಹುದು. ಆದರೆ ನಮ್ಮಲ್ಲಿ ತಕ್ಷಣಕ್ಕೆ ಅಂತಹ ವಿಶೇಷವಾದ ಯೋಜನೆಗಳು ಯಾವುವೂ ಇಲ್ಲ. ಮುಂದೆ ಸೈಟ್ ಕೊಡುವ ವಿಷಯದಲ್ಲಿ ಯೋಚನೆ ಮಾಡುತ್ತೇವೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಈಗ ಯಾವ ಸವಲತ್ತುಗಳನ್ನು ಅವರಿಗೆ ಕೊಡುತ್ತಿದ್ದೀರಿ, ಮುಂದೆ ಹೊಸ ಸವಲತ್ತುಗಳನ್ನು ಕೊಡಬೇಕೆಂದು ಮಾಡಿದ್ದೀರಿ, ಹೊಸ ವಿಚಾರಗಳಲ್ಲಿ ಕೈಯಾಡಿಸ ತಕ್ಕಂಥ, ಮದುವೆಯಾಗದೇ ಇರತಕ್ಕ ಇಬ್ಬರು ಸಚಿವರು ನಮ್ಮಲ್ಲಿದ್ದಾರೆ. ಹೊಸ ವಿಚಾರದಲ್ಲಿ ಅವರು ಕೆಲಸ ಮಾಡುತ್ತಾರೆ. ಆದುದರಿಂದ ನಮ್ಮ ಸಚಿವರಾದಂಥ ಮಾನ್ಯ ರಘುಪತಿಯವರು, ಸನ್ಮಾನ್ಯ ಲಕ್ಷ್ಮೀಸಾಗರ್‌ರವರು ಈ ರೀತಿ ಅನುಸೂಚಿತ ಜಾತಿ ಅನುಸೂಚಿತ ಆದಿಮಜಾತಿ ಹುಡುಗಿ ಯರನ್ನು ಮದುವೆ ಯಾಗಿ ಮಾರ್ಗದರ್ಶನ ಮಾಡಿದರೆ ಇದೇ ಸವಲತ್ತು ಅವರಿಗೆ ಕೊಡುತ್ತೀರಾ ?

ಸಭಾಧ್ಯಕ್ಷರು.—ಮಂತ್ರಿಗಳೇ ಏಕೆ, ನಿಮ್ಮ ಕಡೆಯೂ ಅಂತಹ ಸದಸ್ಯರಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮೊದಲು ಮಂತ್ರಿಗಳು ಮಾರ್ಗದರ್ಶನ ಮಾಡಿದರೆ, ಸದಸ್ಯರು ಅವರ ಹಿಂದೆ ಹೋಗುತ್ತಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ಈ ನಿಯಮ ನನಗೆ ಅನ್ವಯಿಸುವುದಿಲ್ಲ. ಮದುವೆಯಾಗದಿರು ವುದೇ ನನ್ನ ನಿಯಮ. ಇದರಿಂದ ದೇಶದ ಕಲ್ಯಾಣ ಮದುವೆ ಆದವರಿಗಿಂತ ಜಾಸ್ತಿಯಾಗುತ್ತ ದೆಂದು ನನ್ನ ಭಾವನೆ.

ಶ್ರೀ ರಾಮಕೃಷ್ಣ ಹೆಗ್ಗಡೆ.—ಮದುವೆ ಆಗದೆ ಕಲ್ಯಾಣ ಮಾಡುವುದು!

ಶ್ರೀ ಎಂ. ಎಸ್. ಕೃಷ್ಣನ್.—ತಾವು ಬೇರೆ ರಾಜ್ಯದಲ್ಲಿ ಇರಬಹುದು ಎಂದು ಹೇಳಿದಿರಿ. ಅದನ್ನು ತರಿಸಿಕೊಂಡು ಪರಿಶೀಲಿಸಿ ಹೆಚ್ಚಿನ ಅನುಕೂಲ ಕಲ್ಪಿಸುವುದರ ಕಡೆ ಯೋಚನೆ ಮಾಡುತ್ತೀರಾ ?

ಶ್ರೀಮತಿ ಚಂದ್ರಪ್ರಭಾ ಅರಸು.—ವಿಶೇಷ ಸೌಲಭ್ಯಗಳನ್ನು ಒದಗಿಸಿ ಕೊಡುವುದಕ್ಕೆ ಸಲಹೆ ಗಳು ಏನಾದರೂ ಇದ್ದರೆ ಕೊಡಿ. ಅದನ್ನು ಪರಿಗಣಿಸೋಣ.

ಶ್ರೀ ಎಸ್. ಆರ್. ಬೊಮ್ಮಾಯಿ.—ಇಷ್ಟೆಲ್ಲಾ ಸೌಲಭ್ಯ ತೆಗೆದುಕೊಂಡು, ಮದುವೆಯಾಗಿ ಡೈವೊರ್ಸ್ ಮಾಡಿದರೆ ಏನು ಮಾಡುವುದು ?

ಶ್ರೀ ಎಂ. ವೀರಪ್ಪ ಮೊಯಿಲಿ.—ಮದುವೆ ಆಗದೆ ಡೈವೊರ್ಸ್‌ನ ಪ್ರಾಮುಖ್ಯತೆ ಗೊತ್ತಾಗು ವುದಿಲ್ಲ. ಮದುವೆ ಆದಮೇಲೆ ಅದರ ಪ್ರಾಮುಖ್ಯತೆ ಗೊತ್ತಾಗುತ್ತದೆ.

ಮಲಪ್ರಭಾ ಎಡದಂಡೆ ಕಾಲುವೆಯ ನಿರ್ಮಾಣಕ್ಕಾಗಿ ಕಾರ್ಯಕ್ರಮ

೪೦೪ (೯೭೧) ಶ್ರೀ ಬಿ. ಬಿ. ಚಿಮ್ಮನಕಟ್ಟಿ (ಬಾದಾಮಿ) ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ೧೯೮೩-೮೪, ೧೯೮೪-೮೫ ಮತ್ತು ೧೯೮೫-೮೬ ವರ್ಷಗಳಲ್ಲಿ, ಮಲಪ್ರಭಾ ಎಡದಂಡೆ ಕಾಲುವೆಯ ನಿರ್ಮಾಣಕ್ಕಾಗಿ ಉದ್ದೇಶಿಸಿರುವ ಕಾರ್ಯಕ್ರಮ ಏನು ?

ಆ) ೧೯೮೩-೮೪, ೧೯೮೪-೮೫, ಮತ್ತು ೧೯೮೫-೮೬ ವರ್ಷಗಳಲ್ಲಿ ಒದಗಿಸಲಾಗಿರುವ ಅನುದಾನ ಮತ್ತು ನಿರೀಕ್ಷಿಸಲಾಗಿರುವ ನೀರಾವರಿ ಸಾಮರ್ಥ್ಯ ಎಷ್ಟು?

ಇ) ಈವರೆಗೆ ಇಲಾಖೆ ಸಾಧಿಸಿರುವ ಪ್ರಗತಿ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಆ) ೧೯೮೩–೮೪ ೯೩ನೆಯ ಕಿ.ಮಿ. ವರೆಗೆ ಕಾಲುವೆ ಮುಗಿಸಿ, ೩೮ನೆಯ ಬ್ಲಾಕಿಗೆ ನೀರು ಬಿಡುವುದು.

೧೯೮೪–೮೫ ೧೦೪ನೆಯ ಕಿ.ಮಿ. ವರೆಗೆ ಕಾಲುವೆ ಮುಗಿಸಿ, ೪೨ನೆಯ ಬ್ಲಾಕಿಗೆ ನೀರು ಬಿಡುವುದು.

೧೯೮೫–೮೬ ಪರಿಶೀಲನಾ ಹಂತದಲ್ಲಿದೆ.

ಆ)	ಒಟ್ಟು ಯೋಜನೆಗೆ ಎಷ್ಟಾದಂಡಿಗೆ (ಲಕ್ಷ ರೂ.ಗಳು)		ನಿರೀಕ್ಷಿತ ನೀರಾವರಿ ಸಾಮರ್ಥ್ಯ ಒಟ್ಟು ಯೋಜನೆಗೆ ಎಷ್ಟಾದಂಡಿಗೆ (ಹೆಕ್ಟೇರುಗಳು)	
೧೯೮೩–೮೪	೧,೧೦೦	೪೨೩.೧೬	೮,೦೧೯	೬,೪೨೩
೧೯೮೪–೮೫	೧,೨೫೦ ಲಕ್ಷ ರೂ. ಇಡಲಾಗಿದೆ	೪೩೧ ೦೦ ಲಕ್ಷ ರೂ. ಇಡಲಾಗಿದೆ	೬,೨೫೨	೪,೯೫೯
೧೯೮೫–೮೬	ಪರಿಶೀಲನೆಯಲ್ಲಿದೆ.		ಪರಿಶೀಲನೆಯಲ್ಲಿದೆ.	
ಇ)	ಜನವರಿ, ೧೯೮೪ರ ವರೆಗೆ ಸಾಧಿಸಿರುವ ಪ್ರಗತಿ.	೯೭೧.೮೯	೩೮೩.೦೦	೬,೦೪೦	೪,೮೩೧

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಮಾನ್ಯ ಅಧ್ಯಕ್ಷರೇ, ಈಗ ೮೪–೮೫ನೇ ಇಸವಿ ಎನ್ನುವುದರೊಳಗಾಗಿ ೧೦೪ ಕಿಲೋಮಿಟರ್‌ಗೆ ಒಟ್ಟು ಆಚ್ಚುಕಟ್ಟು ಪ್ರದೇಶ ಎಷ್ಟು? ತಾವು ತಮ್ಮ ಪ್ಲಾನ್ ಪ್ರಕಾರವಾಗಿ ಎಷ್ಟು ನೀರು ಕೊಡಬೇಕಾಗಿತ್ತು, ಎಷ್ಟು ನೀರು ಕೊಡುವುದಕ್ಕೆ ತಯಾರಾಗಿದ್ದೀರಿ ? ಎನ್ನುವುದನ್ನು ತಿಳಿಸಬೇಕು ? ಇನ್ನು ಎರಡನೆಯದು, ಫಿಸಿಕಲ್ ಬ್ಯಾಕ್‌ಲಾಗ್, ಫೈನಾನ್ಷಿಯಲ್ ಬ್ಯಾಕ್‌ಲಾಗ್ ತೋರಿಸಿ ಕೊಟ್ಟಿದ್ದೀರಿ. ಇದನ್ನು ಯಾವ ರೀತಿ ಫಿಲಪ್ ಮಾಡುತ್ತೀರಿ? ಮೂರನೆಯದು, ೮೪–೮೫, ೮೫–೮೬ನೇ ಇಸವಿಯಲ್ಲಿ ಕೆಲಸಗಳನ್ನು ತೆಗೆದುಕೊಳ್ಳುವುದಕ್ಕೆ ಪೂರ್ವಭಾವಿಯಾಗಿ ತಾವು ಸರ್ವೆ ಮಾಡುವುದಕ್ಕಾಗಲೀ, ಎಸ್ಟಿಮೇಟ್ ಮಾಡುವುದಕ್ಕಾಗಲಿ, ಏನಾದರೂ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೀರಾ, ಹೇಗೆ ?

ಶ್ರೀ ಹೆಚ್. ಡಿ. ದೇವೇಗೌಡ.—೧೯೮೪–೮೫ ರದ್ದು ಈಗಾಗಲೇ ಹೇಳಿದ್ದೇನೆ. ನಾವು ಖರ್ಚು ಮಾಡುವುದರಲ್ಲಿ ೧೦೪ ಕಿಲೋಮಿಟರ್‌ಗಳಿಗೆ ಕಾಲುವೆ ಮುಗಿಸಿ, ೪೨ ಬ್ಲಾಕ್‌ಗಳಿಗೆ ನೀರು ಕೊಡತಕ್ಕದ್ದು, ಈ ವರ್ಷದ ಪ್ರೋಗ್ರಾಂ. ಸನ್ಮಾನ್ಯ ಸದಸ್ಯರು ಹೇಳಿದಹಾಗೆ Rs. 12.5 crores proposed for Malaprabha Project. An amount of Rs. 4.3 crores is allotted to canal works in view to create irrigation potential for 4959 hectares by March 1985. ಇದು ನಮ್ಮ ಕಾರ್ಯಕ್ರಮ. ಇದರ ಜೊತೆಗೆ ಅವರು, ೮೫–೮೬, ೮೬–೮೭ಕ್ಕೆ ಕೆಲಸ ತೆಗೆದುಕೊಳ್ಳುವುದಕ್ಕೆ ಸರ್ವೆ ಮಾಡಿದ್ದೀರಾ, ಕೆನಾಲ್ ಅಲೈನ್‌ಮೆಂಟ್ ಮಾಡಿದ್ದೀರಾ, ಎಂದು ಕೇಳಿದ್ದಾರೆ. ಅದೆಲ್ಲಾ ಕಾರ್ಯಕ್ರಮ ನಡೆದುಕೊಂಡು ಹೋಗುತ್ತದೆ. ಅದರ ಬಗ್ಗೆ ಸದಸ್ಯರು ಸಂಶಯಪಡಬೇಕಾದುದು ಇಲ್ಲ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—೧೯೮೪–೮೫ನೇ ಇಸವಿ ಫಿಸಿಕಲ್ ಟಾರ್ಗೆಟ್ ಅಚೀವ್‌ಮೆಂಟ್ ಮಾಡಬೇಕೆಂದು ಹೇಳಿದ್ದೀರಿ. ಇದನ್ನು ಅಚೀವ್ ಮಾಡಬೇಕಾದರೆ ಮೊದಲು ಸಬ್–ಡಿವಿಜನ್‌ನು ಒಪನ್ ಮಾಡಬೇಕು, ಇನ್‌ವೆಸ್ಟಿಗೇಷನ್ ಡಿವಿಜನ್ ಮಾಡಬೇಕು, ಅಲ್ಲಿ ಯಾವ ರೀತಿಯ ಸರ್ವೆ ಕೆಲಸ ಪ್ರಾರಂಭವಾಗಿಲ್ಲ ಎಂಬುದನ್ನು ತಿಳಿದುಕೊಂಡೇ ನಾನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಫಿಸಿಕಲ್ ಅಚೀವ್‌ಮೆಂಟ್ ಮಾಡಬೇಕಾದರೆ ಪ್ರಿಲಿಮಿನರಿ ಇನ್‌ವೆಸ್ಟಿಗೇಷನ್, ಪ್ರಪೋಸಲ್ಸ್, ಎಸ್ಟಿಮೇಟ್ ಎಲ್ಲಾ ರೆಡಿ ಆಗಬೇಕಾಗುತ್ತದೆ. ೮೪–೮೫ನೇ ಇಸವಿ ಕೆಲಸ ಮಾಡುವುದಕ್ಕೆ ೮೫–೮೬ರಲ್ಲಿ ಸಾಧ್ಯವಾಗುತ್ತದೆಯೇ ಎಂದು ನನ್ನ ವಿಚಾರ.

ಶ್ರೀ ಹೆಚ್. ಡಿ. ದೇವೇಗೌಡ.—೧೯೮೪-೮೫ರಲ್ಲಿ ಮಾಡತಕ್ಕ ಕೆಲಸಕ್ಕೆ ಪೂರ್ವಸಿದ್ಧತೆ, ಸರಕಾರ ಮಾಡಿಕೊಳ್ಳುವುದಕ್ಕೆ, ಸಾಕಷ್ಟು ಸಿಬ್ಬಂದಿ ಇದೆ. ಅದರ ಬಗ್ಗೆ ನಿಮಗೆ ಕಾಳಜಿ ಬೇಡ. ಈ ಸದನದಲ್ಲಿ ಚರ್ಚೆಯಾದಾಗ, ಎರಡೂ ಕಡೆಯ ಮಾನ್ಯ ಸದಸ್ಯರು ಕೊಟ್ಟಂಥ ಸಲಹೆಗಳ ಆಧಾರದ ಮೇಲೆ, ಕೃಷ್ಣಾ ಬೇಸಿನ್‌ಗೆ ಹೆಚ್ಚು ಹಣ ಖರ್ಚು ಮಾಡಬೇಕು. ೧೨.೫೦ ಕೋಟಿಗೂ ಹೆಚ್ಚು ಹಣ ಖರ್ಚು ಮಾಡಬೇಕೆನ್ನುವ ದೃಷ್ಟಿಯಿಂದ ನಾವು ಇದನ್ನು ಮಾಡುತ್ತೇವೆ. ಈ ಬಗ್ಗೆ ಆಶ್ವಾಸನೆ ಕೊಡುತ್ತೇನೆ.

ಬಸವನ ಬಾಗೇವಾಡಿ ತಾಲ್ಲೂಕಿನ ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ಮುಳುಗಡೆ ಯಾಗುವ ಗ್ರಾಮಗಳ ಭವಿಷ್ಯ ಕುರಿತು

೪೦೫ (೧೦೩೧) ಶ್ರೀ ಮಲ್ಲಿಕಾರ್ಜುನ ವಿ. ಬನ್ನಿ (ಗುಳೇದಗುಡ್ಡ).—ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ವಿಜಾಪುರ ಜಿಲ್ಲೆಯ ಬಸವನ ಬಾಗೇವಾಡಿ ತಾಲ್ಲೂಕಿನ ಕೃಷ್ಣ ಮೇಲ್ದಂಡೆ ಯೋಜನೆಯಲ್ಲಿ ೧) ಸಿದ್ದನಾಥ ೨) ಬಿಸಿಲಕೊಪ್ಪ ೩) ಗಣಿ ೪) ತಿಮ್ಮಲಗಿ ೫) ಮಜರೆ ಕೆಪ್ಪ ೬) ಮರಿಮಟ್ಟಿ ಗ್ರಾಮಗಳು ಮುಳುಗಡೆ ಪ್ರದೇಶದಲ್ಲಿ ಸೇರುತ್ತವೆಯೇ?

ಆ) ಸದರಿ ಗ್ರಾಮಗಳಿಗೆ ಪುನರ್ವಸತಿ ಹಾಗೂ ಪರಿಹಾರಧನ ಒದಗಿಸಲಾಗುತ್ತಿದೆಯೆ?

ಇ) ಹಾಗಿದ್ದಲ್ಲಿ ಪುನರ್ವಸತಿ ಯಾವ ಜಾಗದಲ್ಲಿ ಮಾಡಿಕೊಡಲಾಗುತ್ತದೆ?

ಈ) ಹಾಗಿಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ಹೌದು.

ಆ) ಹೌದು.

ಇ) ಮುಳುಗಡೆಯಾಗುವ ಸಿದ್ದನಾಥ ಗ್ರಾಮವನ್ನು ಸಿದ್ದನಾಥ ಪುನರ್ವಸತಿ ಕೇಂದ್ರದಲ್ಲಿಯೂ ಬಿಸಿಲಕೊಪ್ಪ, ಗಣಿ ಮತ್ತು ಮಜರೆಕೊಪ್ಪ ಗ್ರಾಮಗಳನ್ನು ಗಣಿ ಪುನರ್ವಸತಿ ಕೇಂದ್ರದಲ್ಲಿಯೂ, ಹಾಗೂ ತಿಮ್ಮಲಗಿ ಮತ್ತು ಮರಿಮಟ್ಟಿ ಗ್ರಾಮಗಳನ್ನು ತಿಮ್ಮಲಗಿ (ನಿದಗುಂದಿ ಪ್ರೌಢಶಾಲೆಯ ಹತ್ತಿರ) ಪುನರ್ವಸತಿ ಕೇಂದ್ರದಲ್ಲಿ ಪುನರ್ವಸತಿಗೊಳಿಸಲಾಗುತ್ತಿದೆ.

ಈ) (ಇ) ನಲ್ಲಿಯ ಉತ್ತರದಿಂದಾಗಿ, ಈ ಪ್ರಶ್ನೆಯು ಉದ್ಭವಿಸುವುದಿಲ್ಲ.

ಶ್ರೀ ಮಲ್ಲಿಕಾರ್ಜುನ ವಿ. ಬನ್ನಿ.—ಸ್ವಾಮಿ, ಕೃಷ್ಣಾ ಮೇಲ್ದಂಡೆ ಯೋಜನೆ ಯಡಿಯಲ್ಲಿ ಮುಳುಗಡೆಯಾದಂಥ ಗ್ರಾಮಗಳಿಗೆ ಇಲ್ಲಿಯವರೆಗೆ ಎಷ್ಟು ಹಣ ಖರ್ಚು ಮಾಡಿದ್ದೀರಿ? ಬಡವರು ಹಾಗೂ ಹರಿಜನರಿಗೆ ಇದುವರೆವಿಗೂ ಪರಿಹಾರಧನ ಸಿಕ್ಕಿಲ್ಲವೆಂಬ ಕೂಗು ಇದೆ ಇದಕ್ಕೆ ಕಾರಣ ಏನು?

ಶ್ರೀ ಹೆಚ್.ಡಿ. ದೇವೇಗೌಡ.—ಸ್ವಾಮಿ, ಇಲ್ಲಿಯವರೆಗೆ ೨೧ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಅಸಿರ ಹಣಕಾಸಿನ ವರ್ಷದಲ್ಲಿ ಪುನರ್‌ವಸತಿ ಕಾರ್ಯಕ್ರಮಕ್ಕಾಗಿ ೬ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಮಾನ್ಯ ಸದಸ್ಯರುಗಳು ಲೋಪದೋಷಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಅವನು ನನ್ನ ಗಮನಕ್ಕೆ ತಂದರೆ ಪರಿಶೀಲನೆ ಮಾಡುತ್ತೇನೆ.

ಶ್ರೀ ಪಾಟೀಲ್.—ಸ್ವಾಮಿ, ನಮ್ಮ ತಾಲ್ಲೂಕಿನಲ್ಲಿ ೫೨ ಗ್ರಾಮಗಳು ಮುಳುಗಡೆಯಾಗಿವೆ ಪುನರ್‌ವಸತಿ ಕಾರ್ಯಕ್ರಮಗಳು ವಿಳಂಬವಾಗದ ರೀತಿಯಲ್ಲಿ ಸರ್ಕಾರದವರು ಯೋಜನೆಗಳನ್ನು ಪೈಗೊಳ್ಳುತ್ತಾರೆಯೆ?